

## ಜಾಗತಿಕ ಸಮಸ್ಯೆ

ರಾಸಾಯನಿಕ ಉತ್ಪಾದನೆ ಮತ್ತು ನಿಯಂತ್ರಣದ ಜಾಗತಿಕ ಸ್ವರೂಪವನ್ನು ಎಚ್ಚರಿಕೆಯಿಂದ ಪರಿಶೀಲಿಸಬೇಕಿದೆ. ಏಕೆಂದರೆ ಸಾಕಷ್ಟು ಪರೀಕ್ಷೆ ಮತ್ತು ಮೇಲ್ವಿಚಾರಣೆಯ ಕೊರತೆಯಿದೆ. ಅನೇಕ ರಾಸಾಯನಿಕಗಳು ಅವುಗಳ ದೀರ್ಘಕಾಲಿಕ ಪರಿಣಾಮಗಳನ್ನು ಪೂರ್ಣವಾಗಿ ಅರ್ಥ ಮಾಡಿಕೊಳ್ಳದೆಯೇ ಮಾರುಕಟ್ಟೆಗೆ ಬಿಡುಗಡೆಯಾಗುತ್ತಿವೆ. ಆ ರಾಸಾಯನಿಕಗಳ ಬಿಡುಗಡೆಯ ನಿಯಂತ್ರಣ ಯಾವುದೇ ಮುನ್ನೆಚ್ಚರಿಕೆಗಳಿಗೆ ಗಮನಹರಿಸದೆ, ಪ್ರತಿಕ್ರಿಯಾತ್ಮಕವಾಗಿದೆ. ಅಂದರೆ ಹಾನಿಯ ನಿರ್ವಿವಾದಿತ ಪುರಾವೆಗಳು ಹೊರಬರುವವರೆಗೂ ಹಾನಿಕಾರಕ ವಸ್ತುಗಳನ್ನು ಬಳಕೆಯಲ್ಲುಳಿಸುತ್ತದೆ.

ಈ ಕೃತಿ ಪ್ರಕಟವಾದಾಗ ಅಮೆರಿಕದ ಉಪಾಧ್ಯಕ್ಷರಾಗಿದ್ದ ಹಾಗೂ ಹವಾಮಾನ ಮತ್ತು ಪರಿಸರ ಚಟುವಟಿಕೆಗಳ ಮುಂಚೂಣಿ ಕಾರ್ಯಕರ್ತರಾಗಿದ್ದ ಅಲ್ ಗೋರ್‌ರವರು ಆ ಕೃತಿಯ ಮುನ್ನುಡಿಯಲ್ಲಿ 'ಅವರ್ ಸ್ಟೋಲನ್ ಫ್ಯೂಚರ್' ಕೃತಿಯನ್ನು 1962ರಲ್ಲಿ ಪ್ರಕಟವಾದ ರೇಚೆಲ್ ಕಾರ್ಸನ್‌ರವರ 'ಸೈಲೆಂಟ್ ಸ್ಪ್ರಿಂಗ್' (ಮೌನ ವಸಂತ) ಕೃತಿಯ ಮುಂದುವರಿದ ಭಾಗ ಎಂದಿದ್ದಾರೆ. 'ಸೈಲೆಂಟ್ ಸ್ಪ್ರಿಂಗ್' ಡಿ.ಡಿ.ಟಿ. ಮತ್ತು ಇತರ ಕೀಟನಾಶಕಗಳು ಪರಿಸರ ಮಲಿನಗೊಳಿಸಿ ಹಲವಾರು ಪಕ್ಷಿ ಪ್ರಾಣಿ ಸಂಕುಲಕ್ಕೆ ಹಾಗೂ ಮಾನವರಿಗೆ ಮಾರಕವಾಗಿವೆ (ವಸಂತ ಋತುವಿನಲ್ಲಿ ಪಕ್ಷಿಗಳು ಕೂಗದೇ ಮೌನವಾಗಿದ್ದುದನ್ನೇ ಅವರು 'ಸೈಲೆಂಟ್ ಸ್ಪ್ರಿಂಗ್' ಅಥವಾ 'ಮೌನವಸಂತ' ಎಂದು ಕರೆದರು) ಎಂಬ ಸ್ಪಷ್ಟ ಎಚ್ಚರಿಕೆ ನೀಡಿ ಆಧುನಿಕ ಅಮೆರಿಕನ್ ಪರಿಸರ ಚಳವಳಿಗೆ ನಾಂದಿ ಹಾಡಿತು.

ಆ ಸಮಯದಲ್ಲಿ ರಾಸಾಯನಿಕ ಕೀಟನಾಶಕಗಳನ್ನು ಉತ್ಪಾದಿಸುವ ಕಂಪನಿ ಕಾರ್ಖಾನೆಗಳ ಉದ್ಯಮಿಗಳು ರೇಚೆಲ್ ಕಾರ್ಸನ್‌ರವರ ವಿಚಾರವನ್ನು ಒಕ್ಕೊರಲಿನಿಂದ ವಿರೋಧಿಸಿದ್ದುದಲ್ಲದೇ 'ಈಕೆಯ ಬೋಧನೆಗಳನ್ನು ಅನುಸರಿಸಿದಲ್ಲಿ ನಾವು ಅಂಧಕಾರದ ಯುಗಕ್ಕೆ ಮರಳಬೇಕಾಗುತ್ತದೆ. ಕೀಟಗಳು, ರೋಗಗಳು ಮತ್ತು ಹುಳಹುಪ್ಪಟೆಗಳು ಪುನಃ ಭೂಮಿಯ ಯಜಮಾನಿಕೆ ವಹಿಸಿಕೊಳ್ಳುತ್ತವೆ' ಎಂದರು. ಅಮೆರಿಕನ್ ಸೈನಾಮಿಡ್ ಕಂಪನಿಯ ಅಧಿಕಾರಿಯೊಬ್ಬರು, 'ಸೈಲೆಂಟ್ ಸ್ಪ್ರಿಂಗ್' ಕೃತಿಯನ್ನು ಲೇವಡಿ ಮಾಡುವ 'ದ ಡೆಸೊಲೆಟ್ ಇಯರ್' (ಪಾಳುಬಿದ್ದ ವರ್ಷ) ಎಂಬ ಕೃತಿಯನ್ನು ರಚಿಸಿದರು ಹಾಗೂ ಅದನ್ನು ಮಾನ್ಸಂಟೊ ಕಂಪನಿ ಅಚ್ಚುಹಾಕಿ ಎಲ್ಲೆಡೆ ಹಂಚಿತು. ಕೆಲವು ಕಂಪನಿಗಳು ರೇಚೆಲ್‌ರ ಪ್ರಾಮಾಣಿಕತೆಯನ್ನು ಪ್ರಶ್ನಿಸಿದರೆ, ಕೆಲವು ಆಕೆಯ ಮಾನಸಿಕ ಸ್ಥಿತಿಯ ಬಗ್ಗೆ ಸಂದೇಹ ವ್ಯಕ್ತಪಡಿಸಿದವು. ಆದರೆ ನಂತರ ಜಗತ್ತಿಗೆ ಅರಿವಾಗಿ ರಾಸಾಯನಿಕ ಕೃಷಿ, ಸಹಜ ಕೃಷಿ ಮುಂತಾದ ಪರಿಸರಸ್ನೇಹಿ ಕೃಷಿ ವಿಧಾನಗಳಿಗೆ ಒತ್ತು ನೀಡಿದ್ದರೂ ಕೀಟನಾಶಕ, ರಾಸಾಯನಿಕಗಳ ಬಳಕೆ ಕಡಿಮೆಯಾಗಿಲ್ಲ.

'ಸೈಲೆಂಟ್ ಸ್ಪ್ರಿಂಗ್' ಕೃತಿಯನ್ನು ಉದ್ಯಮಿಗಳು ವಿರೋಧಿಸಿದಂತೆ 'ಅವರ್ ಸ್ಟೋಲನ್ ಫ್ಯೂಚರ್' ಕೃತಿಯನ್ನು ಸಹ ಕೃತಕ ರಾಸಾಯನಿಕಗಳನ್ನು ಬಳಸಿ ಉತ್ಪನ್ನಗಳನ್ನು ತಯಾರಿಸುವ ಹಲವಾರು ಕಂಪನಿಗಳು ವಿರೋಧಿಸಿದವು. ಕೃತಿಯಲ್ಲಿನ ಅಂಕಿಅಂಶಗಳು ಹಾಗೂ ರಾಸಾಯನಿಕಗಳ ಹಾನಿಯು ಉತ್ಪ್ರೇಕ್ಷೆಯಿಂದ ಕೂಡಿವೆ ಹಾಗೂ ಅವುಗಳಿಗೆ ಸಾಕಷ್ಟು ಸಾಕ್ಷ್ಯಾಧಾರಗಳಿಲ್ಲ ಎಂದು ವಾದಿಸಿದವು. ಆ ಉದ್ಯಮಗಳ ಹಣಕಾಸು ಬೆಂಬಲಿತ ಹಲವಾರು ಸಂಸ್ಥೆಗಳು ಸಹ ಕೃತಿಯಲ್ಲಿನ ವಾದಗಳಿಗೆ ತಮ್ಮದೇ ಪ್ರತಿವಾದಗಳನ್ನು ಮಂಡಿಸಿ, ಅವರ ಸಂಶೋಧನಾ ವಿಧಾನಗಳನ್ನೇ ಟೀಕಿಸಿ ಜನರಲ್ಲಿ ಹೆದರಿಕೆ, ಆತಂಕ ಉಂಟುಮಾಡುತ್ತಿವೆ ಎಂದರು ಹಾಗೂ ಅಂತಹ ಹಲವಾರು ರಾಸಾಯನಿಕಗಳಿಂದಾಗುವ ಅನುಕೂಲ ಮತ್ತು ಲಾಭಗಳನ್ನು ಮಾಧ್ಯಮಗಳಲ್ಲಿ ಪ್ರಚುರಪಡಿಸಿದರು.

ಎಷ್ಟೋ ಸಾರಿ ಅವರ ವಾದಗಳು ಜನರಿಗೆ ಆರ್ಥಿಕ ಅಭಿವೃದ್ಧಿ ಬೇಕೇ ಅಥವಾ ಪರಿಸರ ಸಂರಕ್ಷಣೆ ಬೇಕೇ ಎನ್ನುವಂತಾಗಿತ್ತು. ಕೆಲವು ವಿಜ್ಞಾನಿಗಳು ಸಂಕೀರ್ಣ ಜೈವಿಕ ಪ್ರಕ್ರಿಯೆಗಳನ್ನು 'ಅವರ್ ಸ್ಟೋಲನ್ ಫ್ಯೂಚರ್'ನ ಲೇಖಕರು ಅತಿಯಾಗಿ ಸರಳೀಕೃತಗೊಳಿಸಿ ಮಂಡಿಸಿದ್ದಾರೆ ಹಾಗೂ ಅವರ ವಾದಗಳಿಗೆ ಸಾಕಷ್ಟು ವೈಜ್ಞಾನಿಕ ಪುರಾವೆಗಳಿಲ್ಲ ಎಂದರು. ಲೇಖಕರು ಮಂಡಿಸಿರುವ ಎಂಡೊಕ್ರೈನ್–ಅಡ್ಡಿಪಡಿಸುವ ರಾಸಾಯನಿಕಗಳ ಕುರಿತಂತೆ ಇನ್ನೂ ಆಳ ಅಧ್ಯಯನ ಅವಶ್ಯಕತೆ ಇದೆಯೆಂದರು ಹಾಗೂ ಆ ಕುರಿತ ಸಂಶೋಧನೆಗಳು ನಡೆಯುತ್ತಲೇ ಇವೆ ಎಂದೂ ಹೇಳಿದರು. ಆಗ ಅಮೆರಿಕ ಸರ್ಕಾರವೂ ಈ ಕುರಿತು ಯಾವುದೇ ಶಾಸನಬದ್ಧ ಕ್ರಿಯೆಗಳನ್ನು ಕೈಗೊಳ್ಳಲಿಲ್ಲ. ಸರ್ಕಾರದಲ್ಲಿನ ಕೆಲವರು ಈ ಪುಸ್ತಕದಲ್ಲಿನ ಶಿಫಾರಸುಗಳ ಕುರಿತು ಯಾವುದೇ ರಾಸಾಯನಿಕಗಳ ಮೇಲೆ ನಿರ್ಬಂಧ ಹೇರಲು ಆತುರಪಟ್ಟಂತಾಗುವುದು ಹಾಗೂ ಆರ್ಥಿಕವಾಗಿ ಅಪಾಯಕಾರಿಯಾಗಬಹುದು ಎಂದರು.

ಆದರೂ ಆ ಕೃತಿ ಜಗತ್ತಿನಾದ್ಯಂತ ಕೃತಕ ರಾಸಾಯನಿಕಗಳ ಬಗೆಗಿನ ಎಚ್ಚರಿಕೆ ನೀಡಿತು. ಸಾರ್ವಜನಿಕ ಚರ್ಚೆಗಳಿಗೆ ಅವಕಾಶ ಮಾಡಿಕೊಟ್ಟಿತು ಹಾಗೂ ಎಂಡೊಕ್ರೈನ್ ಅಡ್ಡಿಪಡಿಸುವ ರಾಸಾಯನಿಕಗಳ ಕುರಿತಂತೆ ಹೆಚ್ಚಿನ ಅಧ್ಯಯನ ಸಂಶೋಧನೆಗೆ ಎಡೆಮಾಡಿಕೊಟ್ಟಿದೆ ಮತ್ತು ಪರಿಸರ ಸಂರಕ್ಷಣೆಯ ಹಾಗೂ ಮನುಷ್ಯನನ್ನೊಳಗೊಂಡಂತೆ ಪ್ರಕೃತಿಯಲ್ಲಿನ ಜೀವರಾಶಿಯ ಬಗೆಗಿನ ಕಾಳಜಿ ಹೆಚ್ಚುವಂತೆ ಮಾಡಿದೆ. ಈ ಪುಸ್ತಕ ಪ್ರಕಟಣೆಯಾಗಿ ಸುಮಾರು ಮೂರು ದಶಕಗಳ ನಂತರವೂ ಕೃತಿಯಲ್ಲಿ ಎತ್ತಿ ಹಿಡಿಯಲಾದ ಸಮಸ್ಯೆಗಳು ಹೆಚ್ಚು ಪ್ರಸ್ತುತವಾಗಿವೆ. ಸಂಶ್ಲೇಷಿತ ಅಥವಾ ಕೃತಕ ರಾಸಾಯನಿಕಗಳ ಉತ್ಪಾದನೆ ಮತ್ತು ಬಳಕೆ ಇನ್ನೂ ಹೆಚ್ಚಾಗಿದೆ. ಅದರಂತೆ ಹೊಸ ಸಂಶೋಧನೆಗಳು ಅಂತಹ ಕೃತಕ ರಾಸಾಯನಿಕಗಳ ಮತ್ತು ಮಾನವ ಆರೋಗ್ಯದ ನಡುವಿನ ಹೊಸ ಸಂಬಂಧಗಳನ್ನು ಬಹಿರಂಗಪಡಿಸುತ್ತಲೇ ಇವೆ.

ಈ ಕೃತಿಯಲ್ಲಿ ಕೇವಲ ಸಮಸ್ಯೆಗಳ ಪಟ್ಟಿಯನ್ನು ನೀಡಲಾಗಿಲ್ಲ. ಬದಲಿಗೆ ಕ್ರಿಯೆಗೆ ಕರೆ ನೀಡಲಾಗಿದೆ. ಇಂದು ರಾಸಾಯನಿಕಗಳನ್ನು ಉತ್ಪಾದಿಸುವ, ಬಳಸುವ ಮತ್ತು ಅವುಗಳನ್ನು ನಿಯಂತ್ರಿಸುವ ಕುರಿತಂತೆ ನಮ್ಮಲ್ಲಿ ಒಂದು ನಿದರ್ಶನಾತ್ಮಕ ಬದಲಾವಣೆಯಾಗಬೇಕಾಗಿದೆ ಎಂಬುದನ್ನು ಲೇಖಕರು ಒತ್ತಿಹೇಳಿದ್ದಾರೆ. ನಂತರದ ಪರಿಹಾರಕ್ಕಿಂತ ಮೊದಲೇ ದುರ್ಘಟನೆಯನ್ನು ತಡೆಯುವುದು ಬುದ್ಧಿವಂತಿಕೆ. ಅದಕ್ಕಾಗಿ ವ್ಯಕ್ತಿಗತ ಪ್ರಯತ್ನಗಳ ಜೊತೆಗೆ ಸಮಾಜದ ಮತ್ತು ಕಾನೂನಿನ ಅಥವಾ ಶಾಸನದ ಕಟ್ಟುನಿಟ್ಟಿನ ಕ್ರಮಗಳೂ ಅತ್ಯವಶ್ಯಕವಾಗಿವೆ. ಗ್ರಾಹಕರಿಗೆ ಮಾಹಿತಿಯುಕ್ತ ಆಯ್ಕೆಗಳನ್ನು ಮಾಡಲು ಅವಕಾಶ ನೀಡುವುದರ ಜೊತೆಗೆ ಜಾಗೃತಿ ಮೂಡಿಸುವ ಮೂಲಕ ಮತ್ತು ಜವಾಬ್ದಾರಿಯ ಭಾವನೆಯನ್ನು ಬೆಳೆಸುವ ಮೂಲಕ ಸೂರೆಗೊಂಡ ನಮ್ಮ ಭವಿಷ್ಯವನ್ನು ವಾಪಸ್ಸು ಪಡೆಯಲು ಸಾಧ್ಯವಿದೆ ಅಥವಾ ಆ ಸಾಧ್ಯತೆ ಇಂದು ಶರವೇಗದಲ್ಲಿ ಮುನ್ನಡೆಯುತ್ತಿರುವ ನಮ್ಮ ಆಧುನಿಕ ಬದುಕಿನಲ್ಲಿ ಕೇವಲ ಕನಸೇ?

ಪ್ರತಿಕ್ರಿಯಿಸಿ: **feedback@sudha.co.in**